ನೋಡಿ ಮುಖ ಹೊರಳಿಸಿಕೊಳ್ಳುತ್ತಾನೆ. ಕಳೆದ ಬಾರಿ ಬಂದಾಗ ಒಂದು ದಿನ ಚರ್ಚ್‌ನಲ್ಲಿ ಭೇಟಿಯಾಗಿದ್ದ... ಲ್ಯುಕಾನೊಂದಿಗೆ ಸ್ವಲ್ಪ ಮಾತನಾಡಿದ. ನನ್ನನ್ನು ನೋಡಿ ಆಚೆಗೆ ಹೊರಳಿದ. ಮಾತಿಲ್ಲ ಕತೆಯಿಲ್ಲ, ಕಡೆಗೆ ಒಂದು ಮುಗುಳ್ನಗೆ ಸಹ ಇಲ್ಲ.'

'ಕುಂಜಮ್ಮಾ, ಅವನು ನಿಮ್ಮ ಬಗ್ಗೆ ಸಿಟ್ಟಾಗಿದ್ದಾನೆ.'

'ಯಾವ ವಿಷಯಕ್ಕೆ?'

'ನೀವು ರೀಬಾ ಬಗ್ಗೆ ಏನೇನೋ ಹೇಳಿದ್ದರಲ್ಲ...'

'ಓಹ್... ಅವನ ಹೆಂಡತಿ...! ನಾನು ಏನೂ ಹೇಳಿರಲಿಲ್ಲ, ಸ್ವಲ್ಪ ಗದರಿದ್ದೆ, ಅಷ್ಟೆ. ನಾನು ನಿಮಗೆ ಗದರಿಸಬಾರದೆ?' ಕುಂಜಮ್ಮಾ ರೇಗಿದರು, 'ನಿಮ್ಮ ಮನೆಯನ್ನು ನೋಡಿಕೊಳ್ಳಬೇಕು, ನಿಮ್ಮನ್ನು ಸಾಕಬೇಕು, ಆಗ ಸರಿ; ಆಗ ನಾನು ನಿಮ್ಮ ಕುಂಜಮ್ಮಾ, ನಿಮ್ಮ ತಾಯಿಯ ಸಹೋದರಿ... ಒಂದು ವೇಳೆ ನಾನು ನಿಮಗೆ ಸಲಹೆ ಕೊಟ್ಟರೆ, ನಾನು ಪರಕೀಯಳಾದೆ? ನಿಮ್ಮ ವಿಷಯದಲ್ಲಿ ನಾನು ತಲೆ ಹಾಕಬೇಡ ಎಂದರೆ? ಹೂಂ! ನಿಮಗೆ ಕೇರಿಂಗ್ ಮತ್ತು ನಾನ್ ಇಂಟರ್‌ಫಿಯರಿಂಗ್ ಕುಂಜಮ್ಮಾ ಬೇಕಿತ್ತು. ಈ ದ್ವಿಮುಖ ಮಾನಸಿಕತೆ ನಡೆಯಲ್ಲ, ತಿಳೀತಾ ನ್ಯಾನ್ಸಿ!'

'ಕುಂಜಮ್ಮಾ, ನನ್ನ ತಾಯಿಯನ್ನು ನಿಮ್ಮಲ್ಲೇ ಕಾಣುತ್ತೇನೆ. ನಾವು ನಿಮ್ಮ ತ್ಯಾಗವನ್ನು ಮರೆತಿಲ್ಲ. ನಾನು ನನ್ನ ಬದುಕಿನಿಂದಲೇ ದುಃಖಿಯಾಗಿದ್ದೇನೆ...'

'ನಿನಗೇನು ದುಃಖ? ನೀನು ಜಗತ್ತಿನ ಅತಿ ಉತ್ತಮ ದೇಶದಲ್ಲಿದ್ದೀಯ. ಅತಿ ಸುಖಿ ಜನ ಡೆನ್ಮಾರ್ಕ್‌ನಲ್ಲಿದ್ದಾರೆ ಎಂದು ನ್ಯೂಸ್‌ನಲ್ಲಿ ಬಂದಿತ್ತು.'

'ಕುಂಜಮ್ಮಾ, ಅವನು ನನಗೆ ಹೊಡೀತಾನೆ... ಅದೂ ತುಂಬಾ ಕೆಟ್ಟದ್ದಾಗಿ...'

'ಯಾರು? ನಿನ್ನ ಗಂಡ ಹೊಡೀತಾನಾ? ಅಲ್ಲೂ ಪುರುಷರು ತಮ್ಮ ಹೆಂಡತಿಯರಿಗೆ ಹೊಡೀತಾರಾ? ನಮ್ಮ ದೇಶದಲ್ಲಿ ಮಾತ್ರ ಇದೆಲ್ಲಾ ನಡೆಯುತ್ತೆ ಅಂತ ನಾವು ಯೋಚಿಸುತ್ತೇವೆ...'

'ಇಲ್ನೋಡಿ, ನನ್ನ ತಲೆಯ ಮೇಲಿನ ಗುರುತು... ನನ್ನ ತಲೆಯಲ್ಲಿ ಈ ಗುರುತು ಹೇಗೆ ಬಂತು ಅಂತ ನೀವು ಕೇಳಲೂ ಇಲ್ಲ...'

'ಓಹ್... ನಿಜ...' ಕುಂಜಮ್ಮಾ ನನ್ನ ಬಳಿಗೆ ಬಂದು ನನ್ನ ತಲೆಯನ್ನು ಮುಟ್ಟಿ ಹೇಳಿದರು, 'ಇದು ಆಳ ಗಾಯದ ಗುರುತು...'

'ನಾಲ್ಕು ಹೊಲಿಗೆಗಳನ್ನು ಹಾಕಲಾಗಿತ್ತು. ಅವನು ರಭಸದಿಂದ ತಳ್ಳಿದ್ದ, ತಲೆ ಚೂಪನೆಯ ವಸ್ತುವಿಗೆ ಡಿಕ್ಕಿ ಹೊಡೆದಿತ್ತು. ಸದ್ಯ, ನನ್ನ ಕಣ್ಣಿಗೆ ಏನೂ ಆಗಲಿಲ್ಲ...'

'ಅಯ್ಯೋ ನನ್ನ ಮಗಳೇ...' ಎಂದು ಕುಂಜಮ್ಮಾ ನನ್ನನ್ನು ಅಪ್ಪಿಕೊಂಡಳು, 'ಅಲ್ಲೂ ಇದೆಲ್ಲಾ ನಡೆಯುತ್ತಾ?'

'ಎಲ್ಲಾ ದೇಶಗಳಲ್ಲೂ ಎಲ್ಲಾ ನಡೆಯುತ್ತೆ...'

ನಾನು ಸಂಕ್ಷಿಪ್ತವಾಗಿ ಕುಂಜಮ್ಮಾರಿಗೆ ನನ್ನ ದುಃಖ ಮತ್ತು ನೋವನ್ನು ಹೇಳಿದೆ. ಕುಂಜಮ್ಮಾ ಇದ್ದಕ್ಕಿದ್ದಂತೆ ಅಪ್ಪನ ಮೇಲೆ ಆರೋಪ ಹೊರಿಸಿದರು, 'ಸಮಸ್ಯೆಯ ಮೂಲಕ್ಕೆ ಹೋಗಬೇಕು... ಒಂದು ಕೆಲಸ ತಪ್ಪಾದಾಗ, ಮುಂದಿನ ಎಲ್ಲಾ ಕೆಲಸಗಳೂ ತಪ್ಪಾಗುತ್ತಲೇ ಹೋಗುತ್ತದೆ. ನಿನ್ನ ಮದುವೆ ಆ ಪಾದರಿ ಜೊತೆಗೆ ನಡೆದ ನಂತರ ಇದು ಪ್ರಾರಂಭವಾಯಿತು. ಇದೆಲ್ಲಾ ನಿಮ್ಮಪ್ಪನಿಂದಾಯ್ತು. ನಾನು ಅವರಿಗೆ, ನಿನ್ನ ಮದುವೆಯನ್ನು ಆ ಪಾದರಿಯೊಂದಿಗೆ ಮಾಡಬೇಡಿ, ಅವನ ನಡತೆ ಸರಿಯಿಲ್ಲ ಅಂತ ಕೇಳಿದ್ದೇನೆ ಎಂದು ಹೇಳಿದ್ದೆ...'

'ನಿಮಗೆ ಇದನ್ನೆಲ್ಲಾ ಯಾರು ಹೇಳಿದ್ದು?' ನಾನು ಮಧ್ಯದಲ್ಲಿ ಪ್ರಶ್ನಿಸಿದೆ.

'ರೇಚಲ್ ಹೇಳಿದ್ದ...'

'ಹೌದು ಕುಂಜಮ್ಮಾ, ಆದರೆ ಅವನ ತಪ್ಪಿಗೆ ಶಿಕ್ಷೆ ಸಿಕ್ಕಿದೆ. ಅವನನ್ನು ಚರ್ಚ್‌ನಿಂದ ಹೊರ ಹಾಕಲಾಗಿದೆ. ಇನ್ನು ಜಗತ್ತಿನ ಯಾವ ಚರ್ಚ್‌ಗೂ ಅವನು ಹೋಗಲಾರ.'

'ಅವನಿಗೆ ಎಲ್ಲರೆದುರು ಚಪ್ಪಲಿಯಿಂದ ಹೊಡೆಯಬೇಕಿತ್ತು' ಕುಂಜಮ್ಮಾ ರೇಗಿದರು.

'ಹೋಗ್ಲಿ ಬಿಡಿ ಕುಂಜಮ್ಮಾ, ಈಗ ಅವನು ನನಗೆ ಸಮಸ್ಯೆಯಲ್ಲ. ಅವನು ನನ್ನ ಕಳೆದುಹೋದ ನಿನ್ನೆಯಾಗಿದ್ದಾನೆ, ಅವನು ನನ್ನ ಅತೀತನಾಗಿದ್ದ, ಅಲ್ಲದೆ ಈಗ ಅವನು ಜೋಶ್‌ನ ಪಾಲನೆ–ಪೋಷಣೆ ಮಾಡ್ತಿದ್ದಾನೆ.'

'ಐ... ಐ.... ಕುಂ...ಕುಂಜು...' ಅಮ್ಮಾಚನ್ ತಮ್ಮ ಹೆಂಡತಿಯನ್ನು ಕರೆಯುತ್ತಿದ್ದರು.

'ಸ್ವಲ್ಪ ತಡೀರಿ, ನಾನು ನ್ಯಾನ್ಸಿ ಜೊತೆ ಮಾತನಾಡ್ತಿದ್ದೇನೆ' ಕುಂಜಮ್ಮಾ ಮತ್ತೆ ರೇಗಿದರು. ಆದರೆ ಅಮ್ಮಾಚನ್ ಸುಮ್ಮನಿರದೆ, 'ಐ...ಐ... ಕುಂ...' ಎಂದು ಕರೆಯುತ್ತಲೇ ಇದ್ದರು. ಕುಂಜಮ್ಮಾ ಸೋತು ಲಿವಿಂಗ್‌ರೂಮಿಗೆ ಹೋದರು, ನಾನು ಅವರನ್ನು ಹಿಂಬಾಲಿಸಿದೆ.

ಅಮ್ಮಾಚನ್ ತಮ್ಮ ಬಟ್ಟೆಗಳಲ್ಲಿ ಮೂತ್ರ ವಿಸರ್ಜನೆ ಮಾಡಿಕೊಂಡಿದ್ದರು, ಅವರ ಪೈಜಾಮದಿಂದ ಮೂತ್ರ ಸೋರಿ ನೆಲದ ಮೇಲೆ ಇಳಿದಿತ್ತು.

'ಇವರನ್ನು ಎರಡು ಗಳಿಗೆ ನೋಡದಿದ್ರೆ, ಹೀಗೇ ಆಗುತ್ತೆ. ಡೈಪರ್ ಹಾಕಿಕೊಳ್ಳಿ ಎಂದರೆ ಅದು ಚುಚ್ಚುತ್ತೆ ಅಂತಾರೆ...' ಕುಂಜಮ್ಮಾ ದೂರುತ್ತಾ ಹೇಳಿದರು, 'ನ್ಯಾನ್ಸಿ, ನೀನು ಸ್ವಲ್ಪ ಹೊರಗೆ ಹೋಗು, ನಾನು ಇವರ ಬಟ್ಟೆ ಚೇಂಜ್ ಮಾಡ್ತೀನಿ. ಎಲ್ಲಾ ಒದ್ದೆಯಾಗಿವೆ.'

'ಕುಂಜಮ್ಮಾ, ನಾನು ನಿಮಗೆ ಹೆಲ್ಪ್ ಮಾಡಲೇ?'

'ಬೇಡಮ್ಮಾ, ಇದು ನನ್ನ ನಿತ್ಯದ ಕೆಲಸ, ನೀನೀಗ ಸ್ವಲ್ಪ ಹೊರಗೆ ಹೋಗು.'

ನಾನು ಹೊರಗೆ ವರಾಂಡಕ್ಕೆ ಬಂದೆ. ಮನಸ್ಸಿನಲ್ಲಿ, 'ಕುಂಜಮ್ಮಾರ ಜೀವನ ಎಲ್ಲಿಗೆ ಬಂತಲ್ಲ...?' ಎಂದು ಹೇಳಿಕೊಂಡೆ.

ಐದಾರು ನಿಮಿಷಗಳ ನಂತರ ಕುಂಜಮ್ಮಾ ನನ್ನನ್ನು ಕರೆದರು, 'ನ್ಯಾನ್ಸಿ, ಒಳಗೆ ಬಾ.'

ನಾನು ಒಳಗೆ ಹೋದೆ. ಅಮ್ಮಾಚನ್‌ರ ಬಟ್ಟೆಗಳು ಬದಲಾಗಿದ್ದವು. ಅವರು ನೆಮ್ಮದಿಯಿಂದ ಕೂತಿದ್ದರು. ಅವರು ಗಡಿಯಾರದ ಕಡೆಗೆ ಸಂಜ್ಞೆ ಮಾಡಿದರು. ಕುಂಜಮ್ಮಾರೊಂದಿಗೆ ನಾನೂ ಗಡಿಯಾರವನ್ನು ನೋಡಿದೆ. ಸಂಜೆಯ ಐದು ಗಂಟೆಯಾಗಿತ್ತು.

'ಚಹಾ ಕುಡೀತೀರ?' ಕುಂಜಮ್ಮಾ ಕೇಳಿದರು.

ಅಮ್ಮಾಚನ್ ತಲೆಯಾಡಿಸಿದರು.

ಕುಂಜಮ್ಮಾ ಅಡುಗೆ ಮನೆಗೆ ಹೋಗಿ ಚಹಾ ಮಾಡಲಾರಂಭಿಸಿದರು. ನಾನು ಅಮ್ಮಾಚನ್‌ರ ಸಮೀಪದಲ್ಲಿ ಕೂತೆ.

'ನ...ನ್ಸೀ...' ಅವರು ತುಂಬಾ ಪ್ರಯತ್ನಪಟ್ಟು ಹೇಳಿದರು. ಅವರು ನನ್ನನ್ನು ಗುರುತಿಸಿದ್ದರು.

'ಹೇಗಿದ್ದೀರ ಅಮ್ಮಾಚನ್?'

ಅಮ್ಮಾಚನ್ ತಮ್ಮ ಕೈ ಮತ್ತು ಕಾಲುಗಳೆಡೆಗೆ ಸಂಜ್ಞೆ ಮಾಡುತ್ತಾ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಬಾಯಿಯನ್ನು ತೆರೆದು ಸಾಂಕೇತಿಕ ಭಾಷೆಯಲ್ಲಿ, ನಾಲಿಗೆಯೂ ಹೋಯ್ತು ಎಂದರು. ನನಗೆ ಅವರ ಬಗ್ಗೆ ತುಂಬಾ ಕರುಣೆ ಮೂಡಿತು.

ಕುಂಜಮ್ಮಾ ಕಿಚನ್‌ನಿಂದ ಚಹಾ ಮಾಡಿಕೊಂಡು ಬಂದರು, ಬರುವಾಗ ಒಂದು ತಟ್ಟೆಯಲ್ಲಿ ಡ್ರೈ ಟೋಸ್ಟ್ ಸಹ ತಂದರು.

ಅಮ್ಮಾಚನ್ ಚಹಾದಲ್ಲಿ ಡ್ರೈ ಟೋಸ್ಟನ್ನು ಮುಳುಗಿಸಿ ತಿನ್ನಲಾರಂಭಿಸಿದರು. ನಾಲ್ಕು ಟೋಸ್ಟ್‌ಗಳನ್ನು ತಿಂದ ನಂತರ ಅಮ್ಮಾಚನ್ ಮತ್ತೆ ಟೋಸ್ಟ್‌ಗಳನ್ನು ಕೇಳಿದಾಗ ಕುಂಜಮ್ಮಾ ಹೇಳಿದರು, 'ಇನ್ನು ಬೇಡ... ಇನ್ನೂ ಊಟ ಮಾಡುವುದಿದೆ.'

ಅಮ್ಮಾಚನ್ ಬೇಸರದಿಂದ ಕುಂಜಮ್ಮಾರನ್ನು ನೋಡುತ್ತಾ ಸಾಂಕೇತಿಕ ಭಾಷೆಯಲ್ಲಿ ನನಗೆ ಹೇಳಿದರು, 'ಇವಳು ನನಗೆ ಹೊಟ್ಟೆ ತುಂಬಾ ಊಟ ಕೊಡಲ್ಲ.'

'ಪದೇ ಪದೇ ತಿಂದರೆ ಮೋಶನ್ ಬರುತ್ತೆ, ತೂಕ ಸಹ ಹೆಚ್ಚುತ್ತೆ' ಕುಂಜಮ್ಮಾ ಪತಿಯ ಮಾತಿಗೆ ರೇಗಿದರು. ಅಮ್ಮಾಚನ್ ಅಳುಮೋರೆ ಮಾಡಿಕೊಂಡರು.

ಕುಂಜಮ್ಮಾ ಈಗ ನನ್ನನ್ನು ನೋಡುತ್ತಾ ಹೇಳಿದರು. 'ನಿನ್ನ ಅಪ್ಪನಿಗೆ ಯಾವ ಕೆಲಸವೂ ಸರಿಯಾಗಿ ಮಾಡಲು ಬರಲಿಲ್ಲ. ಅವರು ನನ್ನ ಒಂದು ಮಾತನ್ನೂ ಕೇಳಲಿಲ್ಲ. ನೀಲ್ ಕಾಯಿಲೆ ಬಿದ್ದಾಗ ಅವರಿಗೆ, 'ಅವನನ್ನು ಸರಿಯಾದ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅವನನ್ನು ಮಲಪ್ಪುರಮ್‌ನ ಆಸ್ಪತ್ರೆಯಲ್ಲಿ ತೋರಿಸಬೇಡಿ. ಇಲ್ಲಿ ಒಳ್ಳೆಯ ಆಸ್ಪತ್ರೆಯೂ ಇಲ್ಲ, ವೈದ್ಯರೂ ಇಲ್ಲ' ಎಂದಿದ್ದೆ... ಆದರೆ ಅವರು ತಮಗೆ ಅನ್ನಿಸಿದಂತೆಯೇ ಮಾಡಿದರು.'

'ಕುಂಜಮ್ಮಾ, ಅಪ್ಪನನ್ನು ದೂಷಿಸಬೇಡಿ.'

ಅಮ್ಮಾಚನ್ ದುರುಗುಟ್ಟಿ ನಮ್ಮ ಮಾತುಗಳನ್ನೇ ಕೇಳುತ್ತಿದ್ದರು, ನಂತರ ಇದ್ದಕ್ಕಿದ್ದಂತೆ ನನ್ನ ಕಡೆಗೆ ಸಂಜ್ಞೆಯನ್ನು ಮಾಡುತ್ತಾ ಹೇಳಿದರು, 'ನೆನ್ಸೀ ಅಪ್ಪಾ ದೊಡ್ಡವರು, ನೀವೆಲ್ಲಾ ವ್ಯರ್ಥ!'

ನನಗೆ ನಗು ಬಂತು. ಕುಂಜಮ್ಮಾ ತಮ್ಮ ಪತಿಯ ಬಗ್ಗೆ ರೇಗುತ್ತಾ ಹೇಳಿದರು, 'ಏನು ದೊಡ್ಡವರು... ಅವರು ನಿಮ್ಮನ್ನು ನೋಡಲೂ ಬರಲಿಲ್ಲ. ಇಡೀ ಮಲಪ್ಪುರಮ್ ನಿಮ್ಮನ್ನು ನೋಡಲು ಬಂತು, ಆದರೆ ಕೋಶಿ ಮ್ಯಾಥ್ಯೂ ಮಾತ್ರ ಬರಲಿಲ್ಲ' ಕುಂಜಮ್ಮಾ ಅಪ್ಪನ ಪೂರ್ಣ ಹೆಸರನ್ನು ಹೇಳಿದರು.